ನಂ.	ಹೆಸರು.	ಪುಟಗಳ ಸಂಖ್ಯೆ.	ಖರೀದಿ.			ಪೋಸ್ಟೇಜ್ ಮತ್ತು ಪ್ಯಾಕಿಂಗ್.	
			ರೂ	ಆ.	ಪೈ.	ಆ.	ಪೈ.
57	ಜಾರೀ ಇಲಾಖೆಯ ವಿಧಾನ	55	0	8	0	1	6
58	ಸ॥ 1900ನೆ ಇಸವಿಯ ಮೈಸೂರು ಸೀಮೆಯ ಸ್ಟ್ಯಾಂಪು ರೆಗ್ಯುಲೇಷ್ಯನ್.	103	0	10	0	2	0
59	ಇಸ್ತಿಹಾರ್ನಾಮ ನಂ. 69—ಲೋಕಲ್ ಬೋರ್ಡ್ 195-16-12, ತಾರೀಖು 22ನೆ ಜುಲೈ 1908. ಮೈಸೂರು ಲೋಕಲ್ ಬೋರ್ಡ್ಸ್ ರೆಗ್ಯುಲೇಷನನ್ನು ಅನುಸರಿಸಿ ವಿಧಿಸೋಣವಾದ ನಿಬಂಧನೆಗಳ ಪೈಕಿ 132ನೆಯ ಪ್ಯಾರಾದ ತಿದ್ದುಪಾಟು.	1	0	0	6	0	6
60	ಕ್ರಿಮಿನಲ್ ಪ್ರೊಸೀಜರ್ ಕೋಡ್ (1904) ಬೈಂಡಾದುದು ...	475	2	0	0	4	6
61	ಮೈಸೂರು ಪ್ರಜಾ ಪ್ರತಿನಿಧಿ ಸಭೆಯ ನಡವಳಿಕೆಗಳು—1908.	203	1	0	0	6	0
62	ಮೈಸೂರು ಕೋಡು ಸಂಪುಟ 1.	637	4	0	0	6	0
63	1909ನೆ ಇಸವಿಯ ಮ್ಯುನಿಸಿಪಲ್ ಚುನಾವಣೆ ನಿಬಂಧನೆಗಳು	13	0	1	0	1	0
64	1908ನೆ ಇಸವಿಯ Vನೆ ರೆಗ್ಯುಲೇಷ್ಯನ್ — ಮೈಸೂರು ಪೊಲೀಸ್ ರೆಗ್ಯುಲೇಷ್ಯನ್.	93	0	4	0	1	6
65	1908ನೆ ಇಸವಿಯ IVನೆ ರೆಗ್ಯುಲೇಷ್ಯನ್—ಮೈಸೂರು ಸೀಮೆಯ ಗ್ರಾಮ ನೌಕರಿಗಳ ರೆಗ್ಯುಲೇಷ್ಯನ್.	30	0	1	0	1	0

ರೆಜಿಸ್ಟ್ರೇಷ್ಯನ್ ಫೀ ಅಲಾಯಿದ.

ಎಸ್ ಅಬ್ದುಲ್ ಹೈ, ಕ್ಯೂರೇಟರ್.

ಸ್ಯಾನಿಟೆರಿ ಬೋರ್ಡು, ಕೋಲಾರ ಗೋಲ್ಡ್ ಫೀಲ್ಡ್ಸ್.

ನೋಟಿಸ್, ತಾರೀಖು 11ನೆ ಆಗಸ್ಟು 1909.

ಕಂಟ್ರಾಕ್ಟರ್ ಕಂದಸಾಮಿ ಪೊದಲಿಯಾರ್ ಎಂಬುವರು ಸ್ಯಾನಿಟೆರಿ ಬೋರ್ಡಿನಲ್ಲಿ ಕೆಲವು ಕೆಲಸಗಳನ್ನು ನಡೆಸಿದ್ದಕ್ಕಾಗಿ ರೂಪಾಯಿ 2 11—6—0 ಅವರಿಗೆ ಸಲ್ಲಬೇಕಾಗಿರುವದನ್ನು ಈ ನೋಟಿಸ್ ತಾರೀಖು ಲಾಗಾಯಿತು ಮೂರು ತಿಂಗಳೊಳಗಾಗಿ ಸದರಿಯವರಾಗಲಿ ಅಥವಾ ಅವರ ನ್ಯಾಯವಾದ ವಾರಸ್ದಾರರಾಗಲೀ ಬಂದು ತೆಗೆದುಕೊಂಡು ಹೋಗದಪಕ್ಷದಲ್ಲಿ ಮೇಲ್ಕಂಡ ಪೂರ್ತಿ ಬಲಗನ್ನು ಸರ್ಕಾರಕ್ಕೆ ಸೇರಿಸಿಕೊಳ್ಳಲ್ಪಡುತ್ತೆ.

ಹೆಚ್ಚು ತಪಶೀಲಿಗೆ 1909ನೆ ಇಸವಿ ಆಗಸ್ಟು 26ನೆ ತಾರೀಖು 11ನೆ ಭಾಗದ 702-703ನೆ ಪುಟಗಳನ್ನು ನೋಡಿಕೊಳ್ಳತಕ್ಕದ್ದು.

ಪಿ. ಎಫ್. ಬೌರಿಂಗ್,
ವೈಸ್ ಪ್ರಸಿಡೆಂಟ್.

ತಿಳುವಳಿಕೆ ನೋಟಿಸ್.

ಕೋಲಾರ ಡಿಸ್ಟ್ರಿಕ್ಟ್ ಮುಳುಬಾಗಲ್ ತಾಲ್ಲೂಕು ಆವನಿ ಸಮ್ಮತ್ತು ಕಾಯಂಗುತ್ತಾ ಹೊನಗಾನಹಳ್ಳಿ ಇದಕ್ಕೆ ಮಜರ ರಾಮಾಪುರ-ಜೋಡಿ ಕುರುಬರಹಳ್ಳಿ ಮತ್ತು ಜೋಡಿ ದೇವರಾಯಸಮುದ್ರ ವಗೈರೆ ಗ್ರಾಮಗಳ ಕಾಯಂಗುತ್ತಾದಾರ್ ಮತ್ತು ಜೋಡಿದಾರ್ರಾದ ಸದರಿ ಹೊನಗಾನಹಳ್ಳಿಯಲ್ಲಿರುವ ವೆಂಕಟ್ರಾಮಯ್ಯನವರ ಮಕ್ಕಳಾದ 1ನೆ ವೆಂಕಟೇಶಯ್ಯ, 2ನೆ ರಾಮಸ್ವಾಮಯ್ಯ ಆದ ನಾವುಗಳು ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ :—

ಮೇಲ್ಕಂಡ ವೆಂಕಟ್ರಾಮಯ್ಯನವರ 3ನೆ ಮಗನಾದ ಕ್ರಿಷ್ಣಯ್ಯನೆಂಬುವನು ನಮ್ಮಗಳ ಅವಿಭಕ್ತ ಕುಟುಂಬಕ್ಕೆ ಸೇರಿದವನಾಗಿ ಅವಿಭಕ್ತ ಕುಟುಂಬದಲ್ಲಿ ಇದ್ದುಕೊಂಡೂ ಕೂಡ ಸ್ವೇಚ್ಛೆಯಾಗಿ ಸಂಸೃಷ್ಟಕ್ಕೆ ಸೇರಿದ ಆಸ್ತಿಗಳನ್ನೂ ಮತ್ತು ನಮ್ಮ ಇತರ ಸ್ವಾರ್ಜಿತ ಸ್ವತ್ತುಗಳನ್ನೂ ಕೂಡ ಅಂದರೆ ಮೇಲೆ ವಿವರಿಸಿರುವ ಸ್ವತ್ತುಗಳನ್ನು ಕ್ರಯ, ಭೋಗ್ಯ, ಆಧಾರಾದಿಗಳು ವಗೈರೆ ಪರಭಾರೆ ಮಾಡುತ್ತಿರುವದಾಗಿ ಕಂಡುಬಂದು ಇರುತ್ತೆ. ಮೇಲ್ಕಂಡ ಸ್ವತ್ತುಗಳಲ್ಲಿ ನಮ್ಮಗಳಿಗೆ ಇರತಕ್ಕ ಹಕ್ಕು ಬಾಧ್ಯತೆಯು ಮೇಲ್ಕಂಡ ಕ್ರಿಷ್ಣಯ್ಯನಿಂದ ಪಡದವರಿಗೆ ಲೇಶವೂ ಸಲ್ಲಲಾರದು ತಿಳಿಯುವದು.

ತಾರೀಖು 25ನೆ ಆಗಸ್ಟು 1909.

ವೆಂಕಟೇಶಯ್ಯ.
ರಾಮಸ್ವಾಮಯ್ಯ.